ಭಿಕ್ಷುಗಳು ಯೋಚಿಸಿದ್ದರು. ಅವರು ಹಾಗೆ ಕಷ್ಟಪಡುತ್ತಿದ್ದಾಗ ಅಲ್ಲಿಂದ ಸಮುದ್ರರಾಜನು ಇವರನ್ನು ಓಡಿಸಿದನು" ಎಂದು ಇವರ ಪೂರ್ವಜನ್ಮದ ಕತೆಯನ್ನು ಹೇಳಲು ಮೊದಲು ಮಾಡಿದನು:

ಹಿಂದೆ ಬ್ರಹ್ಮದತ್ತನು ವಾರಾಣಸಿಯಲ್ಲಿ ರಾಜ್ಯವನ್ನಾಳುತ್ತಿದ್ದಾಗ ಬೋಧಿಸತ್ವನು ಸಮುದ್ರದೇವತೆಯಾಗಿ ಹುಟ್ಟಿದ್ದನು. ಒಂದು ಕಾಗೆ ತನ್ನ ಸಂಗಾತಿಯೊಂದಿಗೆ ಆಹಾರವನ್ನು ಹುಡುಕುತ್ತ ಸಮುದ್ರತೀರಕ್ಕೆ ಬಂದಿತು. ಅಲ್ಲಿ ಸ್ವಲ್ಪ ಹೊತ್ತಿನ ಮುಂಚೆ ಮನುಷ್ಯರು ನಾಗದೇವತೆಗೆ ಮೀನು, ಅನ್ನ, ಮದ್ಯ, ಪಾಯಸವೇ ಮುಂತಾದವುಗಳನ್ನು ಅರ್ಪಿಸಿ ಹೋಗಿದ್ದರು. ಕಾಗೆಗಳೆರಡೂ ಈ ಸ್ಥಳಕ್ಕೆ ಬಂದು ಹಾಲು, ಪಾಯಸ, ಮೀನುಗಳನ್ನು ಚೆನ್ನಾಗಿ ತಿಂದು ಮದ್ಯವನ್ನೂ ಹೆಚ್ಚಾಗಿ ಕುಡಿದುಬಿಟ್ಟವು. ಕುಡಿದು ಮದವೇರಿದ ಅವು ಜಲಕ್ರೀಡೆ ಮಾಡಬೇಕೆಂದು ತೀರ್ಮಾನಿಸಿದವು. ಸಮುದ್ರದ ದಡದಲ್ಲಿ ಕುಳಿತು ತೆರೆಗಳಲ್ಲಿ ಸ್ನಾನ ಮಾಡತೊಡಗಿದವು. ಆಗ ಒಂದು ಅಲೆ ಬಂದು ಹೆಣ್ಣುಕಾಗೆಯನ್ನು ಸೆಳೆದುಕೊಂಡು ಹೋಯಿತು. ಒಂದು ಮೀನು ಆ ಹೆಣ್ಣುಕಾಗೆಯನ್ನು ನುಂಗಿ ಬಿಟ್ಟಿತು. "ಅಯ್ಯೋ! ನನ್ನ ಹೆಂಡತಿ ಸತ್ತುಹೋದಳು" ಎಂದು ಈ ಗಂಡು ಕಾಗೆ ಜೋರಾಗಿ ಅಳತೊಡಗಿತು. ಅದರ ಕೂಗಾಟವನ್ನು ಕೇಳಿ ಹಲವಾರು ಕಾಗೆಗಳು ಆ ಸ್ಥಳಕ್ಕೆ ಬಂದು, "ಏಕೆ ಅಳುತ್ತಿರುವೆ?" ಎಂದು ಕೇಳಿದವು. "ದಡದಲ್ಲಿ ಸ್ನಾನ ಮಾಡುತ್ತಿದ್ದ ನನ್ನ ಹೆಂಡತಿಯನ್ನು ಸಮುದ್ರದ ಅಲೆಯೊಂದು ಸೆಳೆದುಕೊಂಡು ಹೋಯಿತು" ಎಂದು ಆ ಗಂಡುಕಾಗೆ ಹೇಳಿತು. ಎಲ್ಲ ಕಾಗೆಗಳು ಜೋರಾಗಿ ಒಂದೇ ಕಂಠದಿಂದ ಅಳತೊಡಗಿದವು.

"ನಮ್ಮ ಮುಂದೆ ಈ ಸಮುದ್ರದ ಸಾಮರ್ಥ್ಯವೇನು? ನಾವು ಇದರ ನೀರನ್ನು ಹೊರಚೆಲ್ಲಿ ಸಮುದ್ರವನ್ನು ಬರಿದು ಮಾಡಿ ನಮ್ಮ ಸಹಾಯಕಳನ್ನು ಮರಳಿ ತರುತ್ತೇವೆ" ಎಂದು ಆ ಕಾಗೆಗಳು ಯೋಚಿಸಿ, ಬಾಯಲ್ಲಿ ನೀರನ್ನು ತುಂಬಿಕೊಂಡು ಹೊರಕ್ಕೆ ಬಿಡತೊಡಗಿದವು. ಆದರೆ, ಉಪ್ಪುನೀರಿನಿಂದಾಗಿ ಗಂಟಲು ಒಣಗಿದ್ದರಿಂದ ನೆಲದ ಮೇಲೆ ಬಂದು ವಿಶ್ರಮಿಸಿಕೊಳ್ಳತೊಡಗಿದವು.

ಅವುಗಳ ಗಂಟಲು ದಣಿದು, ಮುಖ ಒಣಗಿ ಕಣ್ಣುಗಳು ಕೆಂಪಾದಾಗ ಅತ್ಯಂತ ವ್ಯಾಕುಲರಾಗಿ ಪರಸ್ಪರ ಮಾತನಾಡಿಕೊಂಡವು: "ಸ್ನೇಹಿತರೆ! ನಾವೇನೋ ನೀರನ್ನು ಸಮುದ್ರದಿಂದ ತಂದು ಹೊರಗೆ ಚೆಲ್ಲುತ್ತಿದ್ದೇವೆ; ಆದರೆ, ನಾವು ಎಲ್ಲೆಲ್ಲಿಂದ ನೀರನ್ನು ತರುತ್ತೇವೆಯೋ ಅಲ್ಲೆಲ್ಲ ಪುನಃ ನೀರು ತುಂಬಿಕೊಳ್ಳುತ್ತಿದೆ. ನಾವು ಸಮುದ್ರವನ್ನು ಬರಿದು ಮಾಡಲು ಸಾಧ್ಯವಾಗುತ್ತಿಲ್ಲ." – ಹೀಗೆ ಹೇಳುತ್ತ ಈ ಕೆಳಗಿನ ಗಾಥೆಯನ್ನು ಹೇಳಿದವು:

"ನಮ್ಮ ಗಂಟಲು ಒಣಗಿತು, ಬಾಯಿ ನೋಯುತ್ತಿದೆ. ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ, ಆದರೆ ಈ ಸಮುದ್ರ ಮಾತ್ರ ತುಂಬಿಕೊಳ್ಳುತ್ತಲೇ ಇದೆ."

ನಂತರ ಎಲ್ಲ ಕಾಗೆಗಳೂ ಆ ಹೆಣ್ಣುಕಾಗೆಯ ಕೊಕ್ಕಿನ ಸೌಂದರ್ಯವನ್ನೂ, ಮಧುರ ಕಂಠವನ್ನೂ, ದುಂಡಗಿನ ಕಣ್ಣುಗಳನ್ನೂ, ದೇಹದ ಮಾಟವನ್ನೂ ಕುರಿತು ಹೊಗಳುತ್ತ, "ಅಯ್ಯೋ! ಇಂತಹ ಈ ಹೆಣ್ಣುಕಾಗೆ ಈ ಕಳ್ಳ ಸಮುದ್ರದಿಂದ ಸತ್ತುಹೋಯಿತಲ್ಲಾ" ಎಂದು ಗೋಳಾಡಿದವು. ಅವುಗಳು ಹೀಗೆ ವಿಲಾಪಿಸುತ್ತಿದ್ದುದನ್ನು ಸಮುದ್ರದೇವತೆಯು ನೋಡಿ, ಅವರಿಗೆ ಶುಭವನ್ನು ಮಾಡುವ ಉದ್ದೇಶದಿಂದ ಭಯಂಕರ ರೂಪವನ್ನು ತಾಳಿ ಅವುಗಳನ್ನು ಅಲ್ಲಿಂದ ಓಡಿಸಿತು.

ಈ ಜಾತಕವನ್ನು ಹೇಳಿದ ಬುದ್ಧನು "ಆಗಿನ ಹೆಣ್ಣು ಕಾಗೆಯೇ ಇಂದಿನ ಜನ್ಮದಲ್ಲಿ ಮುದಿ ಭಿಕ್ಷುವಿನ ಮೊದಲ ಹೆಂಡತಿಯಾಗಿತ್ತು. ಆಗಿನ ಗಂಡು ಕಾಗೆಯೇ ಈಗಿನ ಜನ್ಮದಲ್ಲಿ



ಆಕೆಯ ಗಂಡನಾಗಿದ್ದ ಮುದಿ ಭಿಕ್ಷುವಾಗಿದ್ದಾನೆ. ಉಳಿದ ಕಾಗೆಗಳೇ ಇದೀಗ ಗೋಳಾಡುತ್ತಿರುವ ಇತರ ಮುದಿ ಭಿಕ್ಷುಗಳಾಗಿದ್ದವು. ನಾನೇ ಹಿಂದೆ ಸಮುದ್ರದೇವತೆಯಾಗಿದ್ದೆ" ಎಂದು ಸಂಬಂಧವನ್ನು ವಿವರಿಸಿದನು.

ಬುದ್ಧನು ನುಡಿದ ವಾಣಿಗಳ ಸಂಗ್ರಹವಾದ **'ಧಮ್ಮಪದ'**ದಲ್ಲಿ ಮೂರ್ಖರ ಲಕ್ಷಣವನ್ನು ಹೀಗೆ ಹೇಳಲಾಗಿದೆ: 'ನನಗೆ ಮಕ್ಕಳುಂಟು, ನನಗೆ ಧನವುಂಟು' ಎಂದು ಮೂರ್ಖನು ಕೊರಗುತ್ತಾನೆ. ಅವನೇ ಸ್ವಂತ ಅವನಿಗೆ ಸೇರಿದವನಲ್ಲ; ಹೀಗಿರುವಾಗ, ಎಲ್ಲಿಯ ಮಕ್ಕಳು, ಎಲ್ಲಿಯ ಧನ?

ಪಂಡಿತರ ಲಕ್ಷಣವನ್ನು ತಿಳಿಸುತ್ತ ಮುಂದಿನ ಅಧ್ಯಾಯದಲ್ಲಿ ಹೀಗೆ ಹೇಳಿದೆ: "ಸತ್ಪುರುಷರು ಎಲ್ಲ ಮೋಹಗಳನ್ನೂ ತ್ಯಜಿಸುತ್ತಾರೆ; ಸಂತರು ಕಾಮನೆಗಳ ಬಯಕೆಯಲ್ಲಿ ತೊಡಗುವುದಿಲ್ಲ. ಸುಖ ದುಃಖಗಳು ಬಂದಾಗ ಹಿಗ್ಗುವುದಿಲ್ಲ, ಕುಗ್ಗುವುದಿಲ್ಲ."

(*ಸಂಗ್ರಹ* : *ಸ್ವಾಮಿ ಕರುಣಾಕರಾನಂದ*)



# ಜೈನಧರ್ಮ ಮತ್ತು ಶ್ರೀರಾಮಕೃಷ್ಣರು



ಸ್ವಾಮಿ ಸುನಿರ್ಮಲಾನಂದ

(ಹಿಂದಿನ ಸಂಚಿಕೆಯಿಂದ)

### ಶ್ರೀರಾಮಕೃಷ್ಣರು ಮತ್ತು 'ವಚನವೇದ'

ವಿಶ್ವದ ಐದು ಸಹಸ್ರ ವರ್ಷಗಳ ಆಧ್ಯಾತ್ಮಿಕ ಪಿಪಾಸೆಯನ್ನೆಲ್ಲಾ ಒಂದೇ ದಿವ್ಯಜೀವನದಲ್ಲಿ ಅನುಭವಿಸಿ ಭಗವಂತನನ್ನು ಭಕ್ತರಾಗಿ, ದಾಸರಾಗಿ, ಸಖರಾಗಿ, ತಾಯಿಯಾಗಿ, ಪ್ರಿಯನಾಗಿ ಪಡೆದು, ಅನಂತರ ಅದ್ವೈತದ ಪರಾಕಾಷ್ಠೆಯನ್ನೇರಿದರು ಶ್ರೀರಾಮಕೃಷ್ಣರು. ಅನಂತರ ಅನ್ಯದೇಶಗಳಲ್ಲಿ ಜನಿಸಿದ ಧರ್ಮಗಳನ್ನೂ ಅರ್ಥಮಾಡಿಕೊಂಡು ಸಾಧನೆ ಮಾಡಿ ಸಿದ್ಧಿಯನ್ನು ಪಡೆದುಕೊಂಡರು. ಈ ಜಗತ್ತಿನಲ್ಲಿ ಒಬ್ಬನೇ ವ್ಯಕ್ತಿ, ಸಂತ, ಅವತಾರ ಅಥವಾ ಮಹಾಪುರುಷ ಇಷ್ಟೊಂದು ವಿಧದ ಅತಿ ಕಠಿಣ ಸಾಧನೆಗಳನ್ನು ಮಾಡಿರುವುದು ಇದೇ ಮೊದಲು. ಸಾಧಾರಣ ಜೀವಿಗಳಾದ ನಾವು ಅವರು ಮಾಡಿರುವ ಸಾಧನೆಗಳಲ್ಲಿನ ಒಂದೇ ಒಂದು ಅಂಶವನ್ನು ಮಾಡಿದರೂ ಜೀವನವೆಲ್ಲಾ ಕಳೆದುಹೋಗುತ್ತದೆ. ಆದರೂ ಆ ರೀತಿಯ ವ್ಯಾಕುಲತೆ ನಮಗೆ ಬರಲು ಸಾಧ್ಯವಿಲ್ಲ. ಹಾಗಾಗಿ 'ಶ್ರೀರಾಮಕೃಷ್ಣ' ಎಂಬ ಒಂದು ಅಭೂತಪೂರ್ವ ಮಹಾನ್‌ಜ್ಯೋತಿಪುರುಷರು ಇಡೀ ಜಗತ್ತಿಗೆಲ್ಲಾ ಬೆಳಕನ್ನು ನೀಡಿ, ಹಿಂದೂ, ಮುಸಲ್ಮಾನ, ಕ್ರೈಸ್ತ, ಬೌದ್ಧ, ಜೈನ – ಎಲ್ಲಾ ಧರ್ಮೀಯರಿಗೂ ತಮ್ಮ ತಮ್ಮ ಧರ್ಮಗಳಲ್ಲಿ ಅಪಾರ ಶ್ರದ್ಧೆ ಬರುವಂತೆ ಮಾಡಿದ್ದಲ್ಲದೆ, ಅನ್ಯೋನ್ಯವಾಗಿ ಬಾಳುವ ವಿಧಾನವನ್ನೂ ತಿಳಿಸಿಹೋಗಿದ್ದಾರೆ.

'ಶ್ರೀರಾಮಕೃಷ್ಣ ವಚನವೇದ' ಎಂಬುದು ಒಂದು ಪುಸ್ತಕ ವಷ್ಟೇ ಅಲ್ಲ, ಅದು ಸಕಲ ಸಾಧನೆಗಳ, ಸಕಲ ಸಿದ್ಧಿಗಳ, ಸಕಲ ಧರ್ಮಗಳ, ಸಕಲ ಯೋಗಗಳ ಅನುಭವದ ಅಭಿವ್ಯಕ್ತಿ. ಅಲ್ಲಿ ಕಲ್ಪನೆಯಿಲ್ಲ, ಅನುಭವಜನ್ಯವಾದ ವಾಣಿಯಿದೆ. ಈ ಗ್ರಂಥದಲ್ಲಿ ಶ್ರೀರಾಮಕೃಷ್ಣರು ಯಾವುದಾದರೂ ಕಠಿಣ ವಿಷಯವನ್ನು ಸರಳವಾಗಿ ತಿಳಿಸಲು ಬಳಸಿದ ಪುಟ್ಟ ಪುಟ್ಟ ಕಥೆಗಳಿವೆ, ಹಾಡುಗಳಿವೆ. ಹಾಗಾಗಿ **'ಉತ್ತರಾಧ್ಯಯನಸೂತ್ರ'** ದಂತೆ 'ವಚನವೇದ' ದಲ್ಲಿಯೂ ವೈವಿಧ್ಯವಿದೆ. ನಾವಿಲ್ಲಿ ಶ್ರೀರಾಮಕೃಷ್ಣರ ವಚನಗಳೊಂದಿಗೆ ಜೈನ ಉಪದೇಶಗಳನ್ನು ತುಲನೆ ಮಾಡಿ ನೋಡಲಿದ್ದೇವೆ.

ಒಂದು ಪ್ರಶ್ನೆ, ಶ್ರೀರಾಮಕೃಷ್ಣರು ಜೈನಧರ್ಮದ ಸಾಧನೆ ಮಾಡಿದರೇನು? ಇದಕ್ಕೆ ಉತ್ತರ, 'ಇಲ್ಲ' ಮತ್ತು 'ಹೌದು.' ಮೊದಲನೆಯ ಉತ್ತರ 'ಇಲ್ಲ', ಏಕೆಂದರೆ ಅವರ ಜೀವನ ಚರಿತ್ರಕಾರರು ಈ ಬಗೆಯ ಸಾಧನೆಯ ಬಗ್ಗೆ ಏನೂ ಹೇಳಿಲ್ಲ. ಎರಡನೆಯ ಉತ್ತರ 'ಹೌದು'. ಏಕೆಂದರೆ ಮೊದಲನೆಯದಾಗಿ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ವು ಹೇಳುವಂತೆ ರಾಮಕೃಷ್ಣರ ಕೋಣೆಯಲ್ಲಿ ಭಗವಾನ್ ಮಹಾವೀರರ ಮೂರ್ತಿ ಇತ್ತು; ಶ್ರೀರಾಮಕೃಷ್ಣರು ಪ್ರತಿನಿತ್ಯವೂ ಪ್ರಾತಃಕಾಲ ಮತ್ತು ಸಾಯಂಕಾಲ ಧೂಪ ತೋರಿಸಿ ಅದಕ್ಕೆ ತಪ್ಪದೇ ಆರಾಧನೆ ಮಾಡುತ್ತಿದ್ದರು. ಎರಡನೆಯದಾಗಿ, ಭಾರತೀಯ ಧರ್ಮಗಳೆಲ್ಲವೂ ತಿಳಿಸುವ ಪ್ರಾರಂಭಿಕ ಸಾಧನೆಯ ಹಂತಗಳು ಒಂದೇ ರೀತಿಯವು – ಸೇವೆ ಮಾಡುವುದು ಹಾಗೂ ಸತ್ಯ, ಅಹಿಂಸೆ, ತ್ಯಾಗ ಇತ್ಯಾದಿಗಳ ಪಾಲನೆ ಮಾಡುವುದು. ಶ್ರೀರಾಮಕೃಷ್ಣರಿಗಿಂತಲೂ ಮಿಗಿಲಾದ ಸತ್ಯನಿಷ್ಠೆ, ಬ್ರಹ್ಮಚರ್ಯ ಪಾಲನೆ – ಇವುಗಳ ಪಾಲಕರು ಈ ಜಗತ್ತಿನಲ್ಲಿ ಜನಿಸಿಲ್ಲವೆಂದೇ ಹೇಳಬೇಕು. ಶ್ರೀರಾಮಕೃಷ್ಣರು ಒಂದೆಡೆ ಶ್ವೇತಾಂಬರರಂತೆ ಪ್ರತಿಮೆಯನ್ನು ಆರಾಧಿಸುತ್ತ ವಾಕ್‌ಗುಪ್ತಿ, ಮನೋಗುಪ್ತಿ ಇತ್ಯಾದಿಗಳನ್ನು ಸ್ವಾಭಾವಿಕವಾಗಿಯೇ ಪಾಲಿಸಿದರೆ, ಮತ್ತೊಂದೆಡೆ ದಿಗಂಬರರಂತೆ ಆಹಾರ, ನಿದ್ರೆ, ವಿಶ್ರಾಂತಿ ಇತ್ಯಾದಿಗಳನ್ನು ತೊರೆದು ಧ್ಯಾನಮಾಡಿದ್ದಾರೆ. ಅವರಿಗೆ ದಿನದಿನವೂ ನೂರಾರು ಅನುಭವಗಳಾಗುತ್ತಿದ್ದವು. ಯಾವ ದೇವಿದೇವತೆಗಳ ದರ್ಶನ ಅವರಿಗೆ ಆಗದೆ ಹೋಯಿತು ಎಂದು ಹೇಳುವುದು ಅಸಾಧ್ಯ. ಹಾಗಾಗಿ ಈ ದೃಷ್ಟಿಯಿಂದ ಶ್ರೀರಾಮಕೃಷ್ಣರು ಆ ಹೆಸರನ್ನು ನೇರವಾಗಿ ಬಳಸದಿದ್ದರೂ ಜೈನಸಾಧನೆ ಮಾಡಿದ್ದಾರೆ ಎಂದೇ ಹೇಳಬೇಕಾಗುತ್ತದೆ.

**ಮತ್ತೊಂದು ಪ್ರಶ್ನೆ:** ಅನೇಕರ ವಿಚಾರವೇನೆಂದರೆ ಜೈನ ಧರ್ಮದಲ್ಲಿ ಮುಖ್ಯವಾದುದು ಅಹಿಂಸೆಯ ಪಾಲನೆ ಎಂದು. ಶ್ರೀರಾಮಕೃಷ್ಣರು ಇದನ್ನು ಪಾಲಿಸಿದರೇನು? ಶ್ರೀರಾಮಕೃಷ್ಣರು ಖಡ್ಗ, ಬಿಲ್ಲು, ಬಾಣಗಳನ್ನು ಧರಿಸಿ ಯುದ್ಧ ಮಾಡಲಿಲ್ಲ. ಅಷ್ಟೇ ಅಲ್ಲ, ಯಾರಿಗೂ ವಂಚನೆ ಮಾಡಲಿಲ್ಲ. ಅಸೂಯೆ ಎಂಬ ಶಬ್ದವು ಸ್ವಪ್ನದಲ್ಲಿಯೂ ಕೂಡ ಅವರ ಮನಸ್ಸಿನ ಬಳಿ ಸುಳಿಯಲು ಸಾಧ್ಯವಿರಲಿಲ್ಲ. ಉತ್ತರಾಧ್ಯಯನ ಸೂತ್ರದಲ್ಲಿ ಹೇಳುವಂತೆ ಅಹಿಂಸೆಯೊಂದೇ ಜೈನಧರ್ಮದ ಭಿತ್ತಿಯಲ್ಲ. ಸತ್ಯ, ಬ್ರಹ್ಮಚರ್ಯ, ತ್ಯಾಗ ಇತ್ಯಾದಿಗಳೂ ಅಲ್ಲಿ ಸಮಾನಪ್ರಾಧಾನ್ಯವುಳ್ಳ ಆದರ್ಶಗಳು. ಅಹಿಂಸೆ ದಯೆಯ ಒಂದು ಮುಖ. ಬಸವಣ್ಣನವರು **'ದಯೆಯಿಲ್ಲದ ಧರ್ಮ ಅದಾವುದಯ್ಯಾ? ದಯವೇ ಧರ್ಮದ ಮೂಲವಯ್ಯಾ!'** ಎಂದು ಹೇಳಿದ್ದಾರೆ. ಎಲ್ಲ ಧರ್ಮಗಳ ಮೂಲವೂ ದಯೆಯೇ ಆಗಿದೆ. ಕ್ರಿಮಿ ಕೀಟ ಇತ್ಯಾದಿಗಳನ್ನು ಕೊಲ್ಲದಿರುವುದು ಅಹಿಂಸೆಯಾದರೆ, ಶ್ರೀರಾಮಕೃಷ್ಣರ ದಯೆ ಇನ್ನೂ ವ್ಯಾಪಕವಾಗಿ, ಸೂಕ್ಷ್ಮಜಾತಿಯ ಜೀವಿಗಳ ತನಕ ಹರಡಿತ್ತು. ತಾವೇ ಹುಲ್ಲಿನ ಮೇಲೆ ನಡೆಯದೇ ಹೋದರೂ, ಒಮ್ಮೆ ಯಾರೋ ಹುಲ್ಲಿನ ಮೇಲೆ ನಡೆದಾಗ ತಮ್ಮ ಎದೆಯ ಮೇಲೆ ನಡೆದಂತಾಗಿ ಅವರು ನರಳಿದ್ದರು. ಪ್ರತಿದಿನವೂ ನಾನಾ ಭಾವಗಳಲ್ಲಿರುತ್ತಿದ್ದ ಅವರು ಆ ದಿನ ಕೆಲವು ಹೊತ್ತು ಪ್ರಕೃತಿಯೊಂದಿಗೆ ಆತ್ಮೈಕತ್ವದ ಭಾವದಲ್ಲಿದ್ದರು. ಇತರರ ದುಃಖವನ್ನು ತಮ್ಮದೇ ದುಃಖವನ್ನಾಗಿ ಮಾಡಿಕೊಂಡು ಅನುಭವಿಸುವುದು ದಯೆಯ ಮಹಾನ್ ಲಕ್ಷಣ. ಯಾರು ಅವರ ಚರಣಗಳಲ್ಲಿ ಒಮ್ಮೆಯಾದರೂ, ಒಂದು ಕ್ಷಣಮಾತ್ರವಾದರೂ ಶರಣರಾಗುತ್ತಾರೋ, ಅವರನ್ನು ಉದ್ಧರಿಸುವುದರಲ್ಲಿ ಶ್ರೀರಾಮಕೃಷ್ಣರು ತೋರುತ್ತಿದ್ದ ಕಾಳಜಿ, ಕಾತರ, ಪ್ರೇಮಗಳನ್ನು ಅವರನ್ನು ಕಂಡವರೆಲ್ಲರೂ ವಿವರಿಸಿದ್ದಾರೆ. ಒಂದು ದಿನ ಒಂದು ತಾಯಿ ಬೆಕ್ಕು ತನ್ನ ನವಜಾತ ಶಿಶುಗಳನ್ನು ತಂದು ಶ್ರೀರಾಮಕೃಷ್ಣರ ಕೋಣೆಯ ಮಂಚದ ಕೆಳಗಿಟ್ಟು ಅವರ ಪಾದಗಳಲ್ಲಿ ಆಶ್ರಯ ಪಡೆಯಿತು. ಮುಗಿಯಿತು, ಶ್ರೀರಾಮಕೃಷ್ಣರು ಆ ಬೆಕ್ಕಿನ ಕುಟುಂಬದ ಯೋಗಕ್ಷೇಮಕ್ಕಾಗಿ ಉದ್ವಿಗ್ನರಾದರು. ಸ್ತ್ರೀಭಕ್ತರೋರ್ವರಿಗೆ ಆ ಬೆಕ್ಕುಗಳ ಜವಾಬ್ದಾರಿ ವಹಿಸಿದಾಗ ಅವರು ಬಹಳ ಆನಂದದಿಂದ ಕೊಂಡೊಯ್ದರು. ಶ್ರೀರಾಮಕೃಷ್ಣರು ಆಗಾಗ ಆ ಬೆಕ್ಕುಗಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಆ ಸ್ತ್ರೀಭಕ್ತೆ ಬೆಕ್ಕುಗಳನ್ನು ಆದರದಿಂದ ಸಲಹುತ್ತಿದ್ದಾರೆಂದು ತಿಳಿದಾಗ ಶ್ರೀರಾಮಕೃಷ್ಣರು ಅವರಿಗೆ ಇಷ್ಟದೇವತಾದರ್ಶನವನ್ನೇ ಮಾಡಿಸಿದರು. ದಯೆ ಅಹಿಂಸೆಯ ಅಂತಸ್ಸತ್ವ. ಅದನ್ನು ನಾವು ಶ್ರೀರಾಮಕೃಷ್ಣರ ಜೀವನದಲ್ಲಿ ನೋಡುತ್ತೇವೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಯಾರ ಹೃದಯವು ಸಕಲ ಜೀವಿಗಳಿಗಾಗಿ ದಯಾಪರವಶವಾಗುತ್ತದೋ, ವ್ಯಕ್ತಿಗತವಾಗಿ ತನ್ನ ಸರ್ವನಾಶವಾದರೂ ಎದೆಗುಂದದೆ ಸಕಲ ಜೀವಿಗಳ ಒಳಿತಿಗಾಗಿ ಯಾವನು ಪರಿಶ್ರಮಿಸುವನೋ ಆತನೇ ನಿಜವಾಗಿಯೂ ಶ್ರೀರಾಮಕೃಷ್ಣರ ಮಗು." ಇಂದು ಜಗತ್ತು ಬಹಳ ಚಿಕ್ಕದಾಗಿ ಹೋಗಿದೆ. ಮನುಷ್ಯರು ಇಂದು ಬಹಳ ಧಾವಂತದಲ್ಲಿದ್ದಾರೆ. ಲಕ್ಷ ಲಕ್ಷ ಮಂದಿ ಪ್ರತಿದಿನವೂ ಪೃಥ್ವಿಯ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಮಾಡುತ್ತಾರೆ. ಆಹಾರದ ನಿಯಮಗಳನ್ನು ಪಾಲಿಸುವುದು ಬಹಳ ಕಷ್ಟ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಹಂದಿಯ ಮಾಂಸವನ್ನು ತಿಂದು ಭಗವಂತನಲ್ಲಿ ಆಸಕ್ತನಾದರೆ ಆತನೇ ಧನ್ಯ! ಆದರೆ ಕೇವಲ ಹವಿಷ್ಯಾನ್ನವನ್ನು ತಿನ್ನುತ್ತಾ ಕಾಮಕಾಂಚನಗಳಲ್ಲಿ ಆಸಕ್ತನಾದವನಿಗೆ ಧಿಕ್ಕಾರ!" ಮತ್ತೊಂದು ಕಡೆ ಅವರು ಹೇಳುತ್ತಾರೆ, "ಜನರು ಜಪತಪಾದಿಗಳನ್ನು ಮಾಡಬಹುದು, ಆದರೆ ವಿಷಯಾಸಕ್ತಿಯಿದ್ದರೆ ಏನೂ ಸಿದ್ಧಿಯಾಗುವುದಿಲ್ಲ; ಯಾವನು ಹಂದಿಯ ಮಾಂಸವನ್ನು ಭಕ್ಷಿಸಿಯೂ ಭಗವಂತನಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವನೋ ಅವನೇ ಧನ್ಯ. ಅವನಿಗೆ ಸಕಾಲದಲ್ಲಿ ಈಶ್ವರದರ್ಶನವಾಗುತ್ತದೆ." ಈ ಎಲ್ಲ ದೃಷ್ಟಿಯಿಂದ ನೋಡಿದರೆ ಅತ್ಯವಶ್ಯಕವಾದ ಸಾಧನೆಯ ಅಂಗಗಳಿಗೆ ಮಾತ್ರ ಮಹತ್ವ ನೀಡಿ ಲಕ್ಷ್ಯದ ಕಡೆಗೆ ಗಮನ ಹರಿಸುವುದನ್ನೇ ನೈಜ ಆಧ್ಯಾತ್ಮಿಕ ಜೀವನವೆಂದು ಶ್ರೀರಾಮಕೃಷ್ಣರು ಉಪದೇಶಿಸಿದರು ಎನ್ನುವುದು ತಿಳಿದುಬರುತ್ತದೆ. ಶ್ರೀರಾಮಕೃಷ್ಣರು ಅತ್ಯಂತ ಶ್ರೇಷ್ಠವಾದ ಜಿನಧರ್ಮದ ಸಾಧನೆ ಮಾಡಿದ್ದಾರೆ ಮತ್ತು ಅದನ್ನೇ ಬೋಧಿಸಿದ್ದಾರೆ ಎಂದು ಇದರಿಂದ ಧಾರಾಳವಾಗಿ ಹೇಳಬಹುದು. ಈಗ ಉತ್ತರಾಧ್ಯಯನಸೂತ್ರದ ಅಧ್ಯಾಯಗಳನ್ನು ಬೇರೆ ಬೇರೆಯಾಗಿ ನೋಡೋಣ. ನಾವಿಲ್ಲಿ ಕೆಲವೊಂದು ಅಧ್ಯಯನಗಳನ್ನು ಮಾತ್ರ ಚರ್ಚಿಸಲಿದ್ದೇವೆ ಮತ್ತು ಆ ಅಧ್ಯಯನಗಳಲ್ಲಿಯೂ ಕೆಲವೇ ಕೆಲವು ವಿಚಾರಗಳನ್ನು ನಿಮ್ಮ ಮುಂದಿಡಲಿದ್ದೇವೆ. ಹಿಂದೆ ಹೇಳಿದಂತೆ ಉತ್ತರಾಧ್ಯಯನ ಸೂತ್ರದ ಭಾಷೆ ಪ್ರಾಕೃತ. ನಾವಿಲ್ಲಿ ಅದಕ್ಕೆ ಸಂವಾದಿಯಾದ ಸಂಸ್ಕೃತ ಶಬ್ದಗಳನ್ನು ಕೊಡಲು ಪ್ರಯತ್ನಿಸಿದ್ದೇವೆ.

### ಉತ್ತರಾಧ್ಯಯನಸೂತ್ರ ಮತ್ತು ವಚನವೇದ

ಜೈನಧರ್ಮದ ಪ್ರಧಾನ ಉಪದೇಶಗಳೊಂದಿಗೆ ಶ್ರೀರಾಮಕೃಷ್ಣರ ಉಪದೇಶಗಳನ್ನು ಹೋಲಿಸಿದರೆ ಅವುಗಳಲ್ಲಿ ಬಹಳ ಹೋಲಿಕೆಗಳು ಇರುವಂತೆ ಕಾಣುತ್ತದೆ. ಅಂತಹ ಕೆಲವು ಸಮಾನ ಅಂಶಗಳು ಹೀಗಿವೆ: **(ಅ) ಯಾವುದೇ ಆದರ್ಶವಿರಲಿ ಅದನ್ನು ಸಾಧಿಸಬೇಕಾದರೆ ಸಾಧನೆ ಮಾಡಬೇಕು. (ಆ) ಈ ಪ್ರಾಪಂಚಿಕ ಜೀವನ ವ್ಯರ್ಥ. (ಇ) ಸಾಧನೆಯ ಸಮುದ್ರದಲ್ಲಿ ಮೇಲೆ ಮೇಲೆ ತೇಲಿದರೆ ಸಾಲದು, ಆಳವಾಗಿ ಮುಳುಗಬೇಕು. (ಈ) ತ್ಯಾಗಮಯ ಜೀವನ ಬಹಳ ಮುಖ್ಯ. (ಉ) ಸತ್ಯನಿಷ್ಠೆ ಅತ್ಯಂತ ಮಹತ್ವಪೂರ್ಣವಾದ ಗುಣ.**

**೧. ವಿನಯ-ಶ್ರುತ ಅಧ್ಯಯನ:** ಉತ್ತರಾಧ್ಯಯನಸೂತ್ರದ ಮೊದಲ ಅಧ್ಯಾಯ ವಿನಯ-ಶ್ರುತ ಅಧ್ಯಯನ. ಇದು ಗುರು-ಶಿಷ್ಯರ ಸಂಬಂಧವನ್ನು ಕುರಿತ ಅಧ್ಯಾಯ. ಇಲ್ಲಿ ಗುರುಭಕ್ತಿಯ ಮಹತ್ವವನ್ನು ಹೇಳಲಾಗಿದೆ. ಶಿಷ್ಯನು

**'ಆಜ್ಞಾಪಾಲನಕಾರೀ, ಗುರೋಃ ಸಮೀಪವರ್ತೀ, ವಿನೀತಃ'** ಅಂದರೆ, ಶಿಷ್ಯನು ಗುರುವಿನ ಆಜ್ಞೆಯನ್ನು ಪಾಲಿಸಬೇಕು, ಗುರುವಿಗೆ ಅನುಕೂಲವಾಗಿ ನಡೆದುಕೊಳ್ಳಬೇಕು ಮತ್ತು ವಿನೀತ ಸ್ವಭಾವದವನಾಗಿರಬೇಕು. ಆಗ ಮಾತ್ರ ಅವನು ಕಲಿತ ವಿದ್ಯೆ ಫಲಿಸುತ್ತದೆ. **'ನಿರರ್ಥಕಾನಿ ವಾಕ್ಯಾನಿ ವರ್ಜಯೇತ್'** – ಶಿಷ್ಯನಾದವನು ವ್ಯರ್ಥಾಲಾಪಗಳನ್ನು ತ್ಯಜಿಸಬೇಕು. ಗುರುವಿನ **'ಮನೋಗತಮ್, ವಾಕ್‌ಗತಮ್'** ಅಂದರೆ, ಮನಸ್ಸಿನ ಮತ್ತು ಮಾತಿನ ಇಂಗಿತಗಳನ್ನು ಅರ್ಥ ಮಾಡಿಕೊಳ್ಳಬೇಕು. ಗುರುಗಳು ಕೇವಲ ಉಪದೇಶವನ್ನು ಮಾತ್ರ ನೀಡುವುದಿಲ್ಲ. ಇಂಗಿತಗಳಿಂದ ತಮ್ಮ ಇಚ್ಛೆ ಅಥವಾ ಉದ್ದೇಶವನ್ನು ತಿಳಿಸುತ್ತಾರೆ. ಸಹಸ್ರಾರು ವರ್ಷಗಳ ಪುರಾತನ ಗ್ರಂಥವಾದ 'ಉತ್ತರಾಧ್ಯಯನಸೂತ್ರ' ಕೃತಿಯು ಈ ಎಲ್ಲ ಗುಣಗಳೂ ಶಿಷ್ಯನಲ್ಲಿ ಇರಬೇಕೆಂದು ತಿಳಿಸುತ್ತದೆ.

ಶ್ರೀರಾಮಕೃಷ್ಣರು ಇದನ್ನೇ, "ವಾದ ಮಾಡಬೇಡ, ಭಗವಂತನನ್ನು ಯಾರು ಅಳೆಯಬಲ್ಲರು?" ಎಂಬ ಮಾತುಗಳಿಂದ ಹೇಳುತ್ತಿದ್ದರು. ಗುರುವಿನ ಇಂಗಿತವನ್ನು ಶಿಷ್ಯ ತಿಳಿಯಬೇಕು ಎಂಬುದರ ಬಗ್ಗೆ ಒಂದು ಘಟನೆಯಿದೆ. ಅಘೋರಮಣೀ ದೇವಿ (ಗೋಪಾಲನ ತಾಯಿ) ಗೋಪಾಲನ ನಿತ್ಯದರ್ಶನ ಪಡೆಯುತ್ತಿದ್ದ ಭಾಗ್ಯವತಿ, ವೃದ್ಧೆ; ಬಡತನದಲ್ಲಿ ಬಾಳುತ್ತಿದ್ದವರು. ಅವಳ ಕಷ್ಟ ನೋಡಿ ಯಾರೋ ಒಮ್ಮೆ ಆಕೆಗೆ ಪಾತ್ರೆ ಮುಂತಾದ ವಸ್ತುಗಳಿರುವ ಒಂದು ಗಂಟನ್ನು ನೀಡಿದರು. ಗೋಪಾಲನ ತಾಯಿಗೆ ಸಂಕೋಚ. ಅತ್ತ ಶ್ರೀರಾಮಕೃಷ್ಣರು ಆ ಗಂಟನ್ನು ಗಂಭೀರವಾಗಿ ನೋಡುತ್ತಿದ್ದರು. ಇದರಿಂದ ಆಕೆಗೆ ಮತ್ತೂ ಸಂಕೋಚವಾಗಿ ಆ ಗಂಟನ್ನು ನದಿಗೆ ಎಸೆದುಬಿಡುವ ಆಲೋಚನೆ ಬಂದಿತ್ತು. ಶ್ರೀಮಾತೆಯವರಿಗೆ ಆಕೆಯ ಕಷ್ಟದ ಅರಿವಿದ್ದುದರಿಂದ ಕೆಲವು ವಸ್ತುಗಳನ್ನಾದರೂ ಉಪಯೋಗಿಸುವಂತೆ ಹೇಳಿದರು. ಆದರೂ ಗೋಪಾಲನ ತಾಯಿ ಅನೇಕ ವಸ್ತುಗಳನ್ನು ಕೊಟ್ಟುಬಿಟ್ಟರು.

ಶ್ರೀರಾಮಕೃಷ್ಣರು ಹೇಳುವ ಮುಂದಿನ ಮಾತುಗಳು ಜೈನಮತದ ಉಪದೇಶದ ಪ್ರತಿಧ್ವನಿಯಂತೆ ಕಾಣುತ್ತದೆ. ಅವರು ಹೀಗೆ ಹೇಳುತ್ತಾರೆ: "ಸಂಸಾರಿಗಳಿಗೆ ಉಪಾಯವೇನು? ಗುರುವಾಕ್ಯದಲ್ಲಿ ವಿಶ್ವಾಸ. ಅವರ ಮಾತುಗಳನ್ನು ಅವಲಂಬಿಸಿ ಜೀವನನಿರ್ವಹಣೆ ಮಾಡುವುದು." ಇದಕ್ಕೆ ಸಮನಾಗಿ ಉತ್ತರಾಧ್ಯಯನಸೂತ್ರ ಹೇಳುತ್ತದೆ, **'ನ ಅಲೀಕಂ ವದೇತ್'** – ಸರ್ವದಾ ಸತ್ಯವನ್ನಾಡಬೇಕು; **'ಮೃಷಾಮ್ ಪರಿತ್ಯಜೇತ್ ಭಿಕ್ಷುಃ'**– "ಭಿಕ್ಷುವು ಅನೃತವಚನವನ್ನು ಸರ್ವದಾ ಸರ್ವಥಾ ತ್ಯಜಿಸಬೇಕು." ಶ್ರೀರಾಮಕೃಷ್ಣರು ಸತ್ಯನಿಷ್ಠೆಯ ಪ್ರತಿಮೂರ್ತಿ. ಸತ್ಯಕ್ಕಾಗಿ ಎಲ್ಲವನ್ನೂ ತ್ಯಜಿಸಿದವರು ಅವರು. ಅವರು ನುಡಿದಂತೆ, **"ಯಾರು ಕೆಲಸಕಾರ್ಯ ಮಾಡುವರೋ, ಕಛೇರಿಗಳಲ್ಲಿ ಕೆಲಸ ಮಾಡುವರೋ, ವಾಣಿಜ್ಯ–ವ್ಯವಸಾಯಗಳನ್ನು ಮಾಡುವರೋ, ಅವರೂ ಸತ್ಯವಂತರಾಗಿರಬೇಕು. ಸತ್ಯನಿಷ್ಠೆಯೇ ಕಲಿಯುಗದ ತಪಸ್ಯೆ."**

**೨. ಪರೀಷಹ ಅಧ್ಯಯನ :** ಈ ಅಧ್ಯಾಯದಲ್ಲಿ ಮುನಿಗಳ ಜೀವನದ ಬಗ್ಗೆ ಹೇಳಲಾಗಿದೆ. ಮುನಿ ಅಥವಾ ಜಿನನಾದವನು ಭೋಗವಸ್ತುಗಳನ್ನು ಮನಸ್ಸಿನಿಂದ ದೂರಸರಿಸಬೇಕು. ಶ್ರೀರಾಮಕೃಷ್ಣರು ಅದನ್ನೇ ಹೀಗೆ ಹೇಳುತ್ತಾರೆ: "ಭೂಮಿ, ಸಂಪತ್ತು ಮತ್ತು ಕಾಮಿನಿ – ಈ ಮೂರು ವಿಷಯಗಳಲ್ಲಿ ಮನಸ್ಸಿಟ್ಟರೆ ಭಗವಂತನ ಮೇಲೆ ಮನಸ್ಸು ನಿಲ್ಲುವುದಿಲ್ಲ." ಮುನಿಗಳಲ್ಲಿ ತೀವ್ರ ವೈರಾಗ್ಯ ಇರಬೇಕು. ಶ್ರೀರಾಮಕೃಷ್ಣರು ಇದರ ಬಗ್ಗೆ, "ಭಗವಂತನ ದರ್ಶನ ಪಡೆಯಬೇಕಾದರೆ ತೀವ್ರ ವೈರಾಗ್ಯ ಅವಶ್ಯಕ" ಎಂದು ಹೇಳುತ್ತಾರೆ. ಹಾಗೆಯೇ, ಉತ್ತರಾಧ್ಯಯನಸೂತ್ರವು ಮುನಿಗೆ ಅಪಾರ ಸಹನಶಕ್ತಿ ಇರಬೇಕು ಎನ್ನುತ್ತದೆ: **'ದಂಶಿತೋಽಪಿ ಕ್ರಿಮಿಕೀಟೈಃ ಶಾಂತೇವ ಮಹಾಮುನಿಃ'** – 'ಕ್ರಿಮಿಕೀಟಗಳಿಂದ ಕಚ್ಚಿಸಿಕೊಂಡರೂ ಮುನಿಯಾದವನು ಸಹಿಸಿಕೊಳ್ಳಬೇಕು.' ಶ್ರೀರಾಮಕೃಷ್ಣರ ಮಾತುಗಳಲ್ಲಿ ಹೇಳುವುದಾದರೆ, "ಯಾರಲ್ಲಿ ಸಹನಶಕ್ತಿ ಇದೆಯೋ ಅವನು ಜಯ ಗಳಿಸುತ್ತಾನೆ."

**೩. ಚಾತುರಂಗೀಯ ಅಧ್ಯಯನ:** ಈ ಅಧ್ಯಾಯದ ಪ್ರಾರಂಭ ಮತ್ತು ಅಂತ್ಯದಲ್ಲಿ ಮಾನವಜನ್ಮದ ಮಹತ್ವದ ಬಗ್ಗೆ ಪ್ರಸ್ತಾಪ ಬರುತ್ತದೆ. **'ಚತ್ವಾರಿ ಪರಮಾಂಗಾನಿ ದುರ್ಲಭಾನೀಹ ಜಂತುನಃ'** – ಮನುಷ್ಯಜನ್ಮ, ಪ್ರಾಚೀನ ಜಿನರ ಉಪದೇಶಗಳು, ಈ ಉಪದೇಶಗಳಲ್ಲಿ ಶ್ರದ್ಧೆ ಮತ್ತು ಅಭ್ಯಾಸ ಮಾಡುವ ಆಸೆ –ಇವು ದುರ್ಲಭ. ಇದಕ್ಕೆ ಸಮಾನವಾಗಿ ಮನುಷ್ಯಜನ್ಮದ ಮಹತ್ವದ ಬಗ್ಗೆ ಶ್ರೀರಾಮಕೃಷ್ಣರು ಹೇಳಿದ ಹಲವಾರು ಮಾತುಗಳನ್ನು 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ನೋಡಬಹುದು.

**೪.ಅಸಂಸ್ಕೃತ ಅಧ್ಯಯನ :** ಉತ್ತರಾಧ್ಯಯನಸೂತ್ರ ಗ್ರಂಥದ ಈ ಅಧ್ಯಾಯವು ಈ ಮಹಾನ್ ಉಪದೇಶವನ್ನು ನೀಡುತ್ತದೆ: "ಓ ಮನುಷ್ಯನೇ! ಮೂರ್ಖನಂತೆ ವ್ಯರ್ಥವಾಗಿ ನಿನ್ನ ಸಮಯ ಕಳೆಯಬೇಡ. ಎಂದಿಗೂ ಈ ಕಳೆದುಹೋದ ದಿನಗಳನ್ನು ನೀನು ಮತ್ತೆ ಪಡೆಯಲಾರೆ. ಮುಪ್ಪು ಬಂದಾಗ ನೀನು ಏನೂ ಮಾಡಲಾರೆ." ಯೌವನದ ಮಹತ್ವ ಮತ್ತು ಯೌವನದಲ್ಲಿಯೇ ಆಧ್ಯಾತ್ಮಿಕತೆಯ ಮಾರ್ಗವನ್ನು ತಳೆಯಬೇಕಾದ ಆವಶ್ಯಕತೆಯನ್ನು ಈ ಅಧ್ಯಾಯದ ಪ್ರಥಮ ಶ್ಲೋಕದಲ್ಲಿಯೇ ಒತ್ತಿ ಹೇಳಲಾಗಿದೆ. ಶ್ರೀರಾಮಕೃಷ್ಣರು ಈ ಮಾತನ್ನೇ ಮತ್ತೆ ಮತ್ತೆ ಹೀಗೆ ಹೇಳುತ್ತಾರೆ: "ಈ ಹುಡುಗರನ್ನು ನೋಡಿದರೆ ನನ್ನ ಮನಸ್ಸು ತಂಪಾಗುತ್ತದೆ. ಶುದ್ಧಾತ್ಮರನ್ನು ನೋಡದೆ ಹೋದರೆ ನಾನು ಹೇಗೆ ತಾನೇ ಜೀವಿಸಲಿ? ಭಗವಂತನ ನಾಮದಿಂದ ಮನುಷ್ಯನು ಪವಿತ್ರನಾಗುತ್ತಾನೆ. ಹಾಗಾಗಿ ನಾಮಕೀರ್ತನೆಯ ಅಭ್ಯಾಸ ಮಾಡುವುದು ಒಳ್ಳೆಯದು. ನಾನು ಯದುಮಲ್ಲಿಕನಿಗೆ ಹೇಳಿದೆ, 'ಮೃತ್ಯು ಸಮೀಪಿಸಿದಾಗ ಸಾಂಸಾರಿಕ ಚಿಂತೆಗಳೇ ಬರುತ್ತವೆ. ಹಾಗಾಗಿ ನಾಮಜಪ, ನಾಮಸಂಕೀರ್ತನೆ ಮಾಡಬೇಕು' ಎಂದು."

ಉತ್ತರಾಧ್ಯಯನಸೂತ್ರ ಗ್ರಂಥದ ಈ ಅಧ್ಯಾಯದ ಎರಡನೆಯ ಶ್ಲೋಕ ಹೀಗೆ ಹೇಳುತ್ತದೆ: **'ಯೋ ಪಾಪಕರ್ಮೇಭ್ಯಃ**

**ಧನಂ ಪ್ರಾಪ್ನೋತಿ ಸೈವ ದುರ್ಮತಿಃ'** – ಯಾರು ಅನ್ಯಾಯ ಅನಾಚಾರಗಳನ್ನು ಮಾಡಿ ಹಣ ಸಂಪಾದಿಸುವನೋ ಅವನೇ ದುರ್ಮತಿ'. ಅಂಥವನಿಗೆ ಇಲ್ಲಿಯೂ ಶಾಂತಿಯಿಲ್ಲ, ಸತ್ತ ಮೇಲೆಯೂ ಶಾಂತಿಯಿಲ್ಲ. ದುಷ್ಟನಾದ ಇವನು **'ನರಕಮ್ ಉಪೈತಿ'** – ನರಕವಾಸಿಯಾಗುತ್ತಾನೆ. ಹಣದ ಬಗ್ಗೆ ಜಾಗರೂಕರಾಗಿರುವಂತೆ ಹೇಳಿದುದಷ್ಟೇ ಅಲ್ಲ, ಹಣ ಇರುವುದು ಇತರರ ಸೇವೆಗಾಗಿ; ಅದು ತನ್ನ ಸ್ವಂತ ತಾಯಿಯ ಸೇವೆಗಾಗಿ ಅಥವಾ ಭಗವಂತನ ಸೇವೆಗೆ ಉಪಯೋಗವಾದರೆ ಒಳ್ಳೆಯದು ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಈ ಬಗ್ಗೆ ಅವರ ಮಾತು ಹೀಗಿದೆ: "ಹಣವನ್ನು ಕೂಡಿಟ್ಟುಕೊಳ್ಳುವ ಪ್ರಯತ್ನ ವ್ಯರ್ಥ. ಏಕೆಂದರೆ ಅತ್ಯಂತ ಕಷ್ಟಪಟ್ಟು ಜೇನುಹುಳುಗಳು ಜೇನು ಗೂಡನ್ನು ಕಟ್ಟುತ್ತವೆ, ಆದರೆ ಬೇರೆ ಯಾರೋ ಬಂದು ಅದನ್ನು ಒಡೆದುಹಾಕುತ್ತಾನೆ ಮತ್ತು ಜೇನುತುಪ್ಪವನ್ನು ತೆಗೆದುಕೊಂಡು ಹೋಗುತ್ತಾನೆ."

ಮುಂದಿನ ಅಧ್ಯಾಯಗಳಲ್ಲಿ ಉತ್ತರಾಧ್ಯಯನ ಗ್ರಂಥವು ಬದ್ಧಜೀವಿಗಳನ್ನು ಉದ್ದೇಶಿಸುತ್ತ, ಜಾಗೃತರಾಗುವಂತೆ ಅವರಿಗೆ ಬೋಧಿಸುತ್ತದೆ; ನಮ್ಮ ದುಃಖದ ಮೂಲ ಅಜ್ಞಾನವೇ ಎಂದು ಹೇಳುತ್ತದೆ; ಸಾಧಕರಿಗೆ ಭಯ ಮತ್ತು ವೈರಭಾವಗಳನ್ನು ತೊರೆಯುವಂತೆ ಕರೆಕೊಡುತ್ತದೆ. ಶ್ರೀರಾಮಕೃಷ್ಣರು ನುಡಿದಂತೆ, ಸಾಧಕನಾದವನು 'ಲಜ್ಜೆ, ತಿರಸ್ಕಾರ ಮತ್ತು ಭಯ' – ಈ ಮೂರನ್ನೂ ತ್ಯಜಿಸಬೇಕು.

ಉತ್ತರಾಧ್ಯಯನ ಸೂತ್ರದ ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಶ್ಲೋಕದಲ್ಲಿ ಈ ಮಾತು ಬರುತ್ತದೆ: "ಒಂದು ಮನೆಯಲ್ಲಿ ಒಬ್ಬನು ಕಷ್ಟಪಟ್ಟು ಹಣ ಸಂಪಾದಿಸುತ್ತಾನೆ; ಮನೆಯವರೆಲ್ಲರೂ ಅದರಿಂದ ಸುಖ ಪಡುತ್ತಾರೆ. ಆದರೆ ಅವನ ಕರ್ಮಫಲವನ್ನು ಸ್ವೀಕರಿಸಲು ಯಾರೂ ಸಿದ್ಧರಾಗಿರುವುದಿಲ್ಲ, ಅರ್ಥಾತ್ ಕಷ್ಟದ ಸಮಯದಲ್ಲಿ ಅವನ ಕಷ್ಟದ ಭಾರವನ್ನು ಯಾರೂ ಸ್ವೀಕರಿಸುವುದಿಲ್ಲ." ಈ ಜೈನ ಶ್ಲೋಕ ವಾಲ್ಮೀಕಿಯ ಪೂರ್ವಜೀವನದ ಕಥೆಯನ್ನೇ ಹೇಳುತ್ತಿರುವಂತೆ ಕಾಣುತ್ತದೆ. ಈ ವಿಚಾರವನ್ನು ಮನದಟ್ಟು ಮಾಡಲು ಶ್ರೀರಾಮಕೃಷ್ಣರು, ಓರ್ವ ಗುರು ತನ್ನ ಶಿಷ್ಯನಿಗೆ ಸತ್ತ ಹಾಗೆ ನಟನೆ ಮಾಡುವಂತೆ ಮತ್ತು ಆ ಸಂದರ್ಭದಲ್ಲಿ ಮನೆಯ ಜನರ ಪ್ರತಿಕ್ರಿಯೆಯನ್ನು ನೋಡುವಂತೆ ಹೇಳಿದ ಮಾತನ್ನು ಉಪಯೋಗಿಸಿದ್ದಾರೆ.

ಶುಷ್ಕ ಪಾಂಡಿತ್ಯ ವ್ಯರ್ಥ ಎಂದು ತನ್ನ ಆರನೆಯ ಅಧ್ಯಾಯದಲ್ಲಿ ಉತ್ತರಾಧ್ಯಯನಸೂತ್ರ ಹೇಳುತ್ತದೆ. ಯಾರು ಬಂಧ–ಮೋಕ್ಷ ಇತ್ಯಾದಿಗಳ ಬಗ್ಗೆ ಅತಿಯಾಗಿ ಮಾತನಾಡುತ್ತಾರೋ ಅದನ್ನು ಅರಿಯುವ ಬಗ್ಗೆ ಯಾವ ಪ್ರಯತ್ನವನ್ನೂ ಮಾಡುವುದಿಲ್ಲವೋ, ಅಂಥವರ ಜೀವನಕ್ಕೆ ಬೆಲೆಯಿಲ್ಲ. ಶ್ರೀರಾಮಕೃಷ್ಣರು ಶುಷ್ಕ ಪಾಂಡಿತ್ಯದ ಬಗ್ಗೆ ಬಹಳ ತೀವ್ರವಾದ ಮಾತುಗಳನ್ನಾಡಿದ್ದಾರೆ, "ಪಾಂಡಿತ್ಯ! ಕೇವಲ ಪಾಂಡಿತ್ಯದಿಂದ ಬಂದ ಲಾಭವೇನು? ಹದ್ದು ಬಹಳ ಮೇಲೆ ಹಾರಾಡುತ್ತದೆ. ಆದರೆ ಅದರ ದೃಷ್ಟಿ ಕೊಳೆತ ವಸ್ತುಗಳ ಮೇಲಿರುತ್ತದೆ."

ಶ್ರೀಮದ್ಭಗವದ್ಗೀತೆ, ಶ್ರೀರಾಮಕೃಷ್ಣ ವಚನವೇದ ಮತ್ತು ಜೈನಧರ್ಮ ಗ್ರಂಥಗಳು – ಈ ಮೂರೂ ಮಹಾನ್ ಆಧಾರಗ್ರಂಥಗಳು ಹೇಳುವುದು ಒಂದನ್ನೇ: "ಓ ಜೀವಿಯೇ ನೀನು ಮಾಡುವ ಸತ್ಕರ್ಮ, ಸಚ್ಚಿಂತನೆ, ಭಗವದಾರಾಧನೆ ಮುಂತಾದ ಕರ್ಮಗಳು ಎಂದಿಗೂ ವ್ಯರ್ಥವಾಗುವುದಿಲ್ಲ." ಇವೆಲ್ಲವೂ ಒಕ್ಕೊರಲಿನಿಂದ, "ಜೀವನ ನಿಷೇಧಾತ್ಮಕವಲ್ಲ, ಸಕಾರಾತ್ಮಕ" ಎಂದು ಬೋಧಿಸುತ್ತವೆ. ಅದೇ ರೀತಿ ಏಡಕ ಅಧ್ಯಯನ ಎಂಬ ಅಧ್ಯಾಯದಲ್ಲಿ ಉತ್ತರಾಧ್ಯಯನ ಸೂತ್ರ ಹೇಳುತ್ತದೆ, "ಯಾರು ಪುಣ್ಯಕರ್ಮ ಮಾಡಿ ಮೃತ್ಯುವಶರಾಗುತ್ತಾರೋ ಅಂಥವರು ಧಾರ್ಮಿಕರು, ಧನಿಕರು ಹಾಗೂ ಶ್ರೀಮಂತರೂ ಆದ ಗೃಹಸ್ಥರಾಗಿ ಜನಿಸುತ್ತಾರೆ ಮತ್ತು ಕರ್ಮಫಲವನ್ನು ಅನುಭವಿಸುತ್ತಾರೆ. ಯಾರು ಜೈನಧರ್ಮದ ನಿಯಮಗಳನ್ನು ಪಾಲನೆ ಮಾಡುವಾಗ ಮೃತರಾಗುತ್ತಾರೋ ಅವರು ದೇವತೆಗಳಾಗುತ್ತಾರೆ." ಶ್ರೀರಾಮಕೃಷ್ಣರು ಕೂಡ ಭಗವದ್ಗೀತೆಯಲ್ಲಿನ (೬ : ೪೧ ಮತ್ತು ೪೨) ಶ್ಲೋಕಗಳನ್ನೇ ಉದ್ಧರಿಸಿ ಈ ಅಂಶವನ್ನು ಒತ್ತಿಹೇಳುತ್ತಾರೆ.

'ನಮಿಪರಿವ್ರಜ್ಯ ಅಧ್ಯಯನ' ಎನ್ನುವುದು ಉತ್ತರಾಧ್ಯಯನ ಸೂತ್ರದ ಅದ್ಭುತಗಳಲ್ಲಿ ಒಂದು. ಮಿಥಿಲೆಯ ರಾಜ ನಮಿ ದಕ್ಷ ಮತ್ತು ಬುದ್ಧಿವಂತ. ಒಂದು ದಿನ ಅವನು ಎಲ್ಲವನ್ನೂ ತ್ಯಜಿಸಿ ಮುನಿಯಾಗಿ ಹೋದ. ಕಾರಣ ಅವನಿಗೆ ಈ ಜಗತ್ತಿನ ಅನಿತ್ಯತೆಯ ಅರಿವಾಯಿತು. ಆಗ ಇಂದ್ರನು ನಮಿಯನ್ನು ಪರೀಕ್ಷಿಸಲು ಬಂದನಂತೆ. "ಮಿಥಿಲಾನಗರಿ ಸುಟ್ಟುಹೋಗುತ್ತಿದೆ! ಓ ನಮಿ, ನಿನಗೆ ದುಃಖವಿಲ್ಲವೇ?" ಎಂದು ಕೇಳಿದನಂತೆ. ಪಂಡಿತರು ತೋರಿಸಿರುವಂತೆ ಮಹಾಭಾರತ ಹಾಗೂ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಶ್ಲೋಕವೇ ಈ ಗ್ರಂಥದಲ್ಲಿಯೂ ಪ್ರಾಕೃತ ಭಾಷೆಯಲ್ಲಿ ನಮಿಯ ಉತ್ತರವಾಗಿ ಮೂಡಿಬಂದಿದೆ.

ಉತ್ತರಾಧ್ಯಯನ ಗ್ರಂಥವನ್ನು ಸಂಪಾದಿಸಿರುವ ಪೂರಣ್ ಚಂದ್ ಶಾಮ್‌ಸುಖಾ ಮತ್ತು ಭಟ್ಟಾಚಾರ್ಯ ಅವರು ಮೇಲಿನ ಪ್ರಸಂಗಕ್ಕೆ ಸರಿಸಮನಾದ ಮಹಾಭಾರತದ (ಶಾಂತಿಪರ್ವ, ಮಾಂಡವ್ಯ–ಜನಕ ಸಂವಾದ, ೨೭೫) ಶ್ಲೋಕವನ್ನು ತಮ್ಮ ಗ್ರಂಥದಲ್ಲಿ ಉದ್ಧರಿಸಿದ್ದಾರೆ:

**ಸುಸುಖಂ ಬತ ಜೀವಾಮಿ ಯಸ್ಯ ಮೇ ನಾಸ್ತಿ ಕಿಂಚನ ।**
**ಮಿಥಿಲಾಯಾಂ ಪ್ರದಗ್ಧಾಯಾಂ ನ ಮೇ ದಹ್ಯತಿ ಕಶ್ಚನ ॥**

ಇದಕ್ಕೆ ಸಮನಾಗಿ ನಮಿ ಹೇಳುತ್ತಾನೆ :

**ಸುಹಂ ವಸಾಮೋ ಜೀವಾಮೋ, ಜೆಸಿಂ ಮೋ ನಾಥಿ ಕಿಂಚನ ।**
**ಮಿಥಿಲಾ ಏ ದಜ್ಝಮಾಣೆ ಯೇ ನ ಮೇ ದಜ್ಝಯಿ ಕಂಚಣಂ ॥**

ಈ ಎರಡೂ–ಸಂಸ್ಕೃತ (ಮಹಾಭಾರತ) ಪ್ರಾಕೃತ (ಉತ್ತರಾಧ್ಯಯನಸೂತ್ರ) – ಒಂದೇ ಶ್ಲೋಕ! ನಮಿ ಮತ್ತು ಜನಕ ಒಬ್ಬನೇ ವ್ಯಕ್ತಿ ಆಗಿರಲು ಸಾಧ್ಯ. ಶ್ರೀರಾಮಕೃಷ್ಣರಂತೂ ಜನಕರಾಜನನ್ನು ಬಹಳ ಶ್ರದ್ಧೆಯಿಂದ ನೋಡುತ್ತಿದ್ದರು. 'ವಚನವೇದ'ದಲ್ಲಿ ಜನಕನ ಜ್ಞಾನದ ಔನ್ನತ್ಯದ ಬಗ್ಗೆ ಬಹಳ ಪ್ರಶಂಸೆಯಿದೆ.